# ಪ್ರಾರ್ಥನೆ

## ಶ್ರೀವಿವೇಕಾನಂದಸ್ತೋತ್ರಮ್

ವಿಶ್ವಮಾನವವಂದ್ಯ ವಿದ್ಯಾವಾರಿನಿಧಿ ಯತಿಸತ್ತಮ
ಪರಮಹಂಸಯತೀಶ-ಶ್ರೀಗುರುರಾಮಕೃಷ್ಣ-ಕರೋದ್ಭವ|
ಸರ್ವಮಾನವ-ಸೌಖ್ಯಚಿಂತಕ ಲೋಕಶಿಕ್ಷಣತತ್ಪರ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

ವಿಶ್ವಮಾನವರಿಂದ ವಂದಿತರೂ ವಿದ್ಯಾಸಮುದ್ರರೂ ಯತಿಶ್ರೇಷ್ಠರೂ ಯತಿವರೇಣ್ಯರಾದ ಶ್ರೀರಾಮಕೃಷ್ಣ ಪರಮಹಂಸರ ಕರಕಮಲಸಂಜಾತರೂ ಸಮಸ್ತ ಮಾನವರ ಹಿತಚಿಂತಕರೂ ಜಗತ್ತಿಗೆ ಉನ್ನತವಾದ ಜ್ಞಾನದ ಶಿಕ್ಷಣವನ್ನು ಕೊಟ್ಟವರೂ ಕೃಪಾಳುಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

ಸರ್ವಮಾನವ-ಸೋದರತ್ವ-ವಿಶಾಲಧರ್ಮ-ಧುರಂಧರ
ಶ್ರೀಚಿಕಾಗೋ-ಧರ್ಮಸಂಸದಿ ವಿಶ್ವಧರ್ಮಯಶಃಪ್ರದ |
ಭಾರತಾವನಿ-ಧರ್ಮಸೌರಭ-ದಿಕ್ತಟೇಷು ಪ್ರಸಾರಕ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

"ಎಲ್ಲ ಮಾನವರು ಸೋದರರು" ಎಂಬ ವಿಶಾಲವಾದ ಧರ್ಮದ ಮುಂದಾಳುಗಳೂ (ಅಮೆರಿಕದ) ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಭೆಯಲ್ಲಿ ಭಾರತದ ಧರ್ಮವೇ ವಿಶ್ವದ ಧರ್ಮಗಳಲ್ಲಿ ಶ್ರೇಷ್ಠವೆಂದು ಸಾರಿ ಭಾರತದ ಯಶಸ್ಸಿಗೆ ಪಾತ್ರರಾದವರೂ ಭಾರತದಲ್ಲಿ ಉದಿಸಿದ ಧರ್ಮಗಳ ಸುವಾಸನೆಯನ್ನು ಅಷ್ಟ ದಿಕ್ಕುಗಳಲ್ಲಿ ಹರಡಿದವರೂ ಕೃಪಾನಿಧಿಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

ಭಾರತೀಯಾಲಸ್ಯವಾರಕ ದಿವ್ಯಕರ್ಮಪ್ರಬೋಧಕ
ಜ್ಞಾನವಿಜ್ಞಾನೋಭಯಾನ್ವಿತ ಭಾರತೋದಯಪ್ರೇರಕ |
ಸಿಂಹವಿಕ್ರಮ-ದಿವ್ಯವಾಣಿ-ಪ್ರಬೋಧಿತಾಖಿಲ-ಮಾನವ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

ಭಾರತೀಯರಲ್ಲಿರುವ ಆಲಸ್ಯವನ್ನು ತೊಲಗಿಸಿದವರೂ ಉನ್ನತವಾದ ಕರ್ಮಗಳನ್ನು ಬೋಧಿಸಿದವರೂ ಜ್ಞಾನ ಹಾಗೂ ವಿಜ್ಞಾನಗಳಿಂದ ಕೂಡಿದ ಭಾರತದ ಉದಯಕ್ಕೆ ಪ್ರೇರಕರೂ "ಸಿಂಹದಂತೆ" ಪರಾಕ್ರಮ ಉಳ್ಳ ದಿವ್ಯವಾದ ವಾಣಿಗಳಿಂದ ವಿಶ್ವದ ಎಲ್ಲ ಮಾನವರಿಗೂ ಜ್ಞಾನದಾನವನ್ನು ಮಾಡಿದವರೂ ದಯಾಳುಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

ರಾಮಕೃಷ್ಣ-ವಿಚಾರವಾರಿಧಿ-ಮಂಥನಾಮೃತ-ದಾಯಕ
ಸರ್ವಮಾನವಶಕ್ತಿ-ಮುಕ್ತಿ-ವಿಚಾರಮಾರ್ಗ-ಪ್ರದರ್ಶಕ |
ಸರ್ವಸಂಗತಿದೂರ ವಿಶ್ವವಿಶಾಲ-ಸೌಖ್ಯವಿಚಿಂತಕ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

ಶ್ರೀರಾಮಕೃಷ್ಣ ಪರಮಹಂಸರ ವಿಚಾರವೆಂಬ ಸಮುದ್ರವನ್ನು ಮಥಿಸಿ ಅದರಿಂದ ಬಂದ ಜ್ಞಾನಾಮೃತವನ್ನು ಜಗತ್ತಿಗೆ ಪಾನ ಮಾಡಿಸಿದವರೂ ಎಲ್ಲ ಮಾನವರ ಶಕ್ತಿ ಹಾಗೂ ಮುಕ್ತಿ ಈ ಎರಡು ವಿಚಾರಗಳ ಮಾರ್ಗದರ್ಶನ ಮಾಡಿದವರೂ ತಾವು ಸರ್ವ ಸಂಗಪರಿತ್ಯಾಗಿಗಳಾದರೂ ವಿಶಾಲವಾದ ವಿಶ್ವದ ಸುಖ ಚಿಂತನೆಯಲ್ಲಿ ತೊಡಗಿದವರೂ ಕೃಪಾನಿಧಿಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

ಭಾರತೀಯ-ಮಹಾತ್ಮಜೀವನ-ಮಾರ್ಗದರ್ಶನತತ್ಪರ
ವಿಶ್ವಮಾನವ-ಸೇವ್ಯಭಾರತ-ಭವ್ಯಧರ್ಮ-ಪ್ರದರ್ಶಕ |
ವಿಶ್ವಮಾನವನಿಷ್ಠ-ಭಾರತ-ಹೀನಗುಣ-ಪರಿವರ್ತಕ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

ಭಾರತದಲ್ಲಿ ಜನಿಸಿದ ಅನೇಕ ಮಹಾತ್ಮರ ಉನ್ನತವಾದ ಮಾರ್ಗದರ್ಶನಗಳನ್ನು ಬೋಧಿಸಿದವರೂ ವಿಶ್ವದ ಎಲ್ಲ ಮಾನವರು ಸೇವಿಸಲು ಯೋಗ್ಯವೂ ಭವ್ಯವೂ ಆದ ಭಾರತೀಯ ಧರ್ಮವನ್ನು ಪ್ರದರ್ಶಿಸಿದವರೂ ವಿಶ್ವಮಾನವರಲ್ಲಿರುವ "ಭಾರತೀಯರು ಅಜ್ಞರು" ಎಂಬ ಹೀನವಾದ ಗುಣವನ್ನು ಪರಿವರ್ತಿಸಿದವರೂ ಕೃಪಾಳುಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

ರಾಮಕೃಷ್ಣ-ಪದಾಬ್ಜಕಿಂಕರ-ದಿವ್ಯಮಾರ್ಗವಿಚಿಂತಕ
ಭವ್ಯಬಾಹುವಿಶಾಲಶೋಭಿತ ಮಂದಹಾಸ-ಮುಖಾಂಬುಜ|
ಸರ್ವಮಾನವಶಾಂತಿ-ಸದ್ಗತಿ-ಸದ್ವಿಚಾರ-ಪ್ರಬೋಧಕ
ಶ್ರೀವಿವೇಕಾನಂದ ಗುರುವರ ಪಾಹಿ ಪಾಹಿ ಕೃಪಾಕರ ||

ಶ್ರೀರಾಮಕೃಷ್ಣಪರಮಹಂಸರ ಪಾದಕಮಲಕಿಂಕರರೂ ಉನ್ನತ ಮಾರ್ಗಗಳ ಅನ್ವೇಷಣೆಯಲ್ಲಿ ತೊಡಗಿದವರೂ ದಿವ್ಯವೂ ವಿಶಾಲವೂ ಆದ ಬಾಹುಗಳಿಂದ ಶೋಭಿತರೂ ಮಂದಹಾಸ ಪೂರಿತವಾದ ಮುಖಕಮಲ ಉಳ್ಳವರೂ ಎಲ್ಲ ಮಾನವರಿಗೂ ಶಾಂತಿ ಹಾಗೂ ಸದ್ಗತಿ ದೊರೆಯುವಂಥ ಉನ್ನತ ವಿಚಾರಗಳನ್ನು ಬೋಧಿಸಿದವರೂ ದಯಾಳುಗಳೂ ಆದ ಶ್ರೀವಿವೇಕಾನಂದ ಗುರುಶ್ರೇಷ್ಠರೇ (ನಮ್ಮನ್ನು) ರಕ್ಷಿಸಿರಿ.

(ರಚಯಿತಾ : ವಿದ್ವಾನ್ ಮಹಾಬಲೇಶ್ವರ ಶಾಸ್ತ್ರೀ, ಗಿರಿನಗರ, ಬೆಂಗಳೂರು)